ಹಿನ್ನೆಲೆಯಲ್ಲಿ ಬಸವಣ್ಣ ಮತ್ತು ವಿವೇಕಾನಂದರ ವೈಚಾರಿಕ ಕ್ರಾಂತಿ ಬಹು ಪ್ರಮುಖ ಪಾತ್ರ ವಹಿಸುತ್ತವೆ, ದೇಶ ಉಳಿಸಲು, ಬೆಳೆಸಲು.

ಬಸವಣ್ಣ ಜಾತ್ಯತೀತ, ವರ್ಗಾತೀತ, ಲಿಂಗಾತೀತ ಸಮ ಸಮಾಜದ ನಿರ್ಮಿತಿಗೆ ಒತ್ತು ಕೊಡುತ್ತಾನೆ. ಸಮಾಜದ ಸರ್ವ ವೃತ್ತಿಜೀವಿಗಳನ್ನೂ – ಸ್ತ್ರೀಯರನ್ನೂ ಒಳಗೊಂಡು –ಸಂಘಟಿಸುತ್ತಾನೆ. ಬಹುಶಃ ಈ ಮಣ್ಣಿನಲ್ಲಿ ಸ್ತ್ರೀ ಸಬಲೀ ಕರಣದ ಕಲ್ಪನೆ ಪೂರ್ಣಪ್ರಮಾಣದಲ್ಲಿ ಬಸವಣ್ಣನಿಂದಲೇ ಆರಂಭವಾಯಿತೆನ್ನಬೇಕು. ಯಾಕೆಂದರೆ, ಬುದ್ಧ–ಮಹಾವೀರರು ಮಾನವತಾವಾದದ ಬಗ್ಗೆ ಕಾಳಜಿ ತೋರಿದ್ದರೂ, ಸ್ತ್ರೀಸಬಲೀಕರಣಕ್ಕೆ ಅಷ್ಟು ಲಕ್ಷ್ಯ ಕೊಡಲಿಲ್ಲ. ಇದು ಒಂದು ದುರಂತವೇ ಸರಿ. ಯಾಕೆಂದರೆ, ಜನಸಂಖ್ಯೆಯ ಅರ್ಧಭಾಗದಷ್ಟಿದ್ದ ಸ್ತ್ರೀಯರ ಬಗ್ಗೆ ಪುರುಷಪ್ರಧಾನ ಸಮಾಜ ತೋರಿದ ಅನಾದರ ಅಕ್ಷಮ್ಯ! ಈಗಲೂ ರಾಜಕೀಯ ಪ್ರಾತಿನಿಧ್ಯದಲ್ಲಿ ಅರ್ಧದಷ್ಟು ಸ್ತ್ರೀ ಮೀಸಲಾತಿಯ ಕಲ್ಪನೆ ಕನಸಿನ ಗಂಟಾದುದು ಮನುಕುಲದ ಹಿನ್ನಡೆಯ ದ್ಯೋತಕವೇ ಸರಿ! ನಾವುಗಳೆಲ್ಲ ತಾಯಗರ್ಭದಿಂದಲೇ ಬಂದ ವರು, ಅವಳೋ ಮಮತಾಮಯಿ. ಆದರೂ, ಆಡಳಿತ ವ್ಯವಸ್ಥೆ ಯನ್ನು ಕೈಯಲ್ಲಿಟ್ಟುಕೊಂಡ ಪುರುಷನು, ದುಡಿಯುವ ವರ್ಗದ ಭಾಗವೇ ಆದ ಮಾತೆಯರನ್ನು ಅಕ್ಷರಜ್ಞಾನದಿಂದ, ತನಗೆ ಸರಿಸಮಾನ ಸ್ಥಾನದಿಂದ ದೂರವಿಟ್ಟಿದ್ದುದು ಅಕ್ಷಮ್ಯ ಅಪರಾಧ. ಇದನ್ನು ಬಸವಣ್ಣನವರು ಗುರುತಿಸುತ್ತಾರೆ. ಅವರ ವಿಚಾರ–ಆಚಾರ ಕ್ರಾಂತಿ ಅಭೂತಪೂರ್ವವಾದುದು. ವೃತ್ತಿಜೀವಿಗಳನ್ನು (ಅನುಭವ ಮಂಟಪದಲ್ಲಿ) ಸಮಾನವೇದಿಕೆಗೆ ತಂದು, ಕಾಯಕ ತತ್ತ್ವದಡಿಯಲ್ಲಿ ಕಾಯಕವೇ ಕೈಲಾಸವೆಂದು ವೃತ್ತಿಗೌರವ ತಂದುಕೊಡುತ್ತಾರೆ ಮತ್ತು ದೇಶದ ಅರ್ಥವ್ಯವಸ್ಥೆಗೆ ಭದ್ರಬುನಾದಿ ಹಾಕುತ್ತಾರೆ. ವೃತ್ತಿಜೀವಿಗಳೆಲ್ಲರೂ ಅವರವರ ವೃತ್ತಿಗಳಿಂದ ಜೀವನ ನಡೆಸಿ ಸ್ವಾವಲಂಬಿಗಳಾಗಿ, ತಾವು ದುಡಿದುದರಲ್ಲಿ ಕೆಲಭಾಗವನ್ನು ನಿರ್ಗತಿಕರಿಗೆ ದೀನದಲಿತರಿಗೆ ಹಂಚುವ ವ್ಯವಸ್ಥೆಯನ್ನು ಜಾರಿಗೆ ತರುತ್ತಾರೆ. ಹೀಗೆ, ತಾವೂ ಬದುಕಿ ಸಮಾಜದ ನೊಂದವರನ್ನೂ ಬದುಕಿಸಿ–ಸಲಹುವ 'ದಾಸೋಹ' ಪರಿಕಲ್ಪನೆಯನ್ನು ಹುಟ್ಟುಹಾಕುತ್ತಾರೆ. ಈ 'ದಾಸೋಹ ತತ್ತ್ವದ' ಹಿನ್ನೆಲೆಯೇ 'ಜಂಗಮತತ್ತ್ವ'. ಜೀವವಿರುವ ಸಕಲಜೀವರಾಶಿಗಳ ಸಮೂಹವೇ 'ಜಂಗಮ'. ಸರ್ವಜೀವಿಗಳ ಹೃದಯವಾಸಿ ಶಿವನೇ ಜಂಗಮ. ನೊಂದವರಿಗೆ, ಕೊನೆಯ ಮನುಷ್ಯನಿಗೆ ಮಾಡುವ ಸೇವೆಯೇ ಪೂಜೆ. ಆದ್ದರಿಂದ, ಬಸವಣ್ಣನ ಪ್ರಕಾರ 'ದಯೆಯೇ ಧರ್ಮ!'. ಇದು ೧೨ನೇ ಶತಮಾನದ ವಿಶ್ವಮಾನವ ಬಸವಣ್ಣನ ವಿಚಾರಕ್ರಾಂತಿ.

ವಿವೇಕಾನಂದರು ೧೯ನೇ ಶತಮಾನದ ಮಾನವೇತಿಹಾಸ ಕಂಡ ಪುರುಷಸಿಂಹ! ವೇದಾಂತದ ಉನ್ನತ ವಿಚಾರಗಳು ಆಚಾರದಲ್ಲಿ ಇಲ್ಲದ್ದನ್ನು ಕಂಡು ಕೆರಳಿ ಇಡೀ ದೇಶವನ್ನು ಬಡಿದೆಬ್ಬಿಸಿದ ಮಹಾ ಮಾನವತಾವಾದಿ. ಒಂದುಕಡೆ 'ಸರ್ವಂ ಖಲ್ವಿದಂ ಬ್ರಹ್ಮ' ಘೋಷಣೆ, ಇನ್ನೊಂದು ಕಡೆ 'ಅಸ್ಪೃಶ್ಯತಾ ಆಚರಣೆ' ; ಒಂದೆಡೆ 'ಸರ್ವೇ ಜನಾಃ ಸುಖಿನೋ ಭವಂತು' ಮಂತ್ರ, ಮತ್ತೊಂದು ಕಡೆ 'ಭೂಸುರರ ವಿಜೃಂಭಣೆಯ ತಂತ್ರ'! ಏನಿದು ವಿರೋಧಾಭಾಸ? ವಿವೇಕಾನಂದರು ಸಿಡಿದೆದ್ದುದು ಈ ವಿಚಾರ–ಆಚಾರಗಳ ವೈರುಧ್ಯದಿಂದ. ಅವರದು ಕ್ರಾಂತಿಕಾರಿ ವ್ಯಕ್ತಿತ್ವ; ಉಪನಿಷದ್ ಋಷಿಗಳ ಜ್ಞಾನ. ಹಾಗೆಯೇ ಅವರದು ಸರ್ವಧರ್ಮ ಸಮನ್ವಯಾಚಾರ್ಯ ಗುರು ಶ್ರೀರಾಮಕೃಷ್ಣ ಪರಮ ಹಂಸರ ಅನುಭಾವ ಬೆರೆತ ವ್ಯಕ್ತಿತ್ವ, ಇಡೀ ಮನುಕುಲವನ್ನೇ ವಿಮುಕ್ತಿಗೊಳಿಸುವ ಕಾರ್ಯತಂತ್ರ ಹೊಂದಿದ್ದ ಅವರು ಭರತ ಭೂಮಿ ಕಂಡ, ಅಷ್ಟೇ ಏಕೆ, ಇಡೀ ಮನುಕುಲ ಕಂಡ ಅಪರೂಪದ ಸಂತ–ಮಹಂತ!

ಸ್ವಾಮಿ ವಿವೇಕಾನಂದರು ವೇದಾಂತವನ್ನು ವಿಜ್ಞಾನದ ತಳಹದಿಯ ಮೇಲೆ ಅರ್ಥೈಸಿಕೊಂಡು, 'ಪ್ರಾಯೋಗಿಕ ವೇದಾಂತ'ವೆಂಬ ವಿಶಿಷ್ಟ ಪರಿಕಲ್ಪನೆಯನ್ನು ಹುಟ್ಟುಹಾಕಿ, ಬೆಟ್ಟ–ಗವಿಗಳಲ್ಲಿ ಹುದುಗಿದ ತತ್ತ್ವವನ್ನು ಬಡವರ ಗುಡಿಸಲಿಗೆ ತಂದು, ಎಲ್ಲೆಲ್ಲೂ ಬ್ರಹ್ಮದರ್ಶನ ಮಾಡಿಸಿದ ಮಾಂತ್ರಿಕ, ಜೀವರಾಶಿಗಳೆಲ್ಲ ದೇವನವತಾರವೆಂದ ದ್ರಷ್ಟಾರ. 'ದರಿದ್ರ ನಾರಾಯಣೋ ಭವ' ವೆಂದು ದೀನ–ದಲಿತರ ಸೇವೆಗೆ ಟೊಂಕಕಟ್ಟಿ ನಿಂತ, ಜಾತಿ–ಮತ–ಲಿಂಗಭೇದಗಳನ್ನು ನೀಗಿನಿಂತ ಅರಿವಿನ ಮಹಾಮೇರು. ಸ್ವರಾಜ್ಯಸಿದ್ಧಿಪ್ರಾಪ್ತಿಗಾಗಿ ಅಂತರಂಗ–ಬಹಿರಂಗ ಸ್ವಾತಂತ್ರ್ಯ ತಂದುಕೊಟ್ಟು, ಮಾನವರೆಲ್ಲರನ್ನೂ **'ಅಮೃತಸ್ಯ ಪುತ್ರಾಃ'** ಎಂದು ಸಂಬೋಧಿಸಿ, ಆತ್ಮವಿಶ್ವಾಸ ಉದ್ದೀಪನಗೊಳಿಸಿ, ಸರ್ವರ ಹೃದಯದಲ್ಲಿ ಕ್ರಾಂತಿಯ ಕಿಡಿ ಹಚ್ಚಿದ ಧೀರ! ವಿವೇಕಾನಂದರ ಉದ್ಬೋಧಕ ತತ್ತ್ವಗಳಿಂದ ಅನೇಕ ಸ್ವಾತಂತ್ರ್ಯ ಸೇನಾನಿಗಳು ಹುಟ್ಟಿಕೊಂಡರು, ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಅಲ್ಲದೇ ಆತ್ಮಾನುಸಂಧಾನಿಗಳು ಸ್ವರಾಜ್ಯಸಿದ್ಧಿಹೊಂದಿ ಪರೋಪಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವಿಶ್ವದಾದ್ಯಂತ ವಿವೇಕಾನಂದ–ರಾಮಕೃಷ್ಣ ಆಶ್ರಮಗಳು ಮಾಡುತ್ತಿರುವುದು ಇದನ್ನೇ. ಆಮುಖೇನ ವಿವೇಕಾನಂದರು ಮನುಕುಲದ ಉತ್ಕ್ರಾಂತಿಗೆ ಕಾರಣೀಭೂತರಾದರು.

ಕೊನೆಯಲ್ಲಿ ಒಂದು ಮಾತನ್ನು ನೆನಪಿಟ್ಟುಕೊಂಡರೆ ಒಳಿತು. ಅದೇನೆಂದರೆ, ಬಸವಣ್ಣ ಮತ್ತು ವಿವೇಕಾನಂದರ ತತ್ತ್ವಗಳು ನಿಂತ ನೀರಲ್ಲ, ಅವು ಚಲಿಸುತ್ತಿರುವ ಪ್ರವಾಹವಿದ್ದಂತೆ. ಸನಾತನವಾದ ತತ್ತ್ವಗಳನ್ನು ಆಯಾಯ ಕಾಲಕ್ಕೆ ತಕ್ಕಂತೆ, ಅನುಭವ–ಅನುಭಾವವೆಂಬ ಮೂಸೆಯಿಂದ ಮಾರ್ಪಡಿಸಿ, ಮಾನವ ಸಮಾಜವನ್ನು ಒಗ್ಗೂಡಿಸಬೇಕು. ಮಾನವನ ಪರಿಪೂರ್ಣ ವಿಕಾಸಕ್ಕಾಗಿ ಹುಟ್ಟಿಕೊಂಡ ತತ್ತ್ವಗಳು ನಿಂತ ನೀರಾಗಿ ಕೊಳೆತು ನಾರುವಂತಾಗಬಾರದು. ಬಸವಣ್ಣನ ತತ್ತ್ವವು 'ಲಿಂಗ'ವೆಂಬ ಕಲ್ಲಿನಲ್ಲಿ ಬಂಧಿಯಾಗಿ, ಅವರ ಜಂಗಮ ತತ್ತ್ವವು ಸ್ಥಾವರವಾಗಿ ನಶಿಸುವುದು ಬೇಡ. ಜಾತಿ ವಿನಾಶಕ್ಕೆ ಕೈಹಾಕಿದ ಬಸವಣ್ಣನ ದಾರ್ಶನಿಕ ಕ್ರಾಂತಿಕಾರಿ ತತ್ತ್ವವು ಮತ್ತೊಂದು ಜಾತಿಯ ಹುಟ್ಟಿಗೆ ಕಾರಣವಾಗಬಾರದು. ಹೀಗೆಯೇ, ವಿವೇಕಾನಂದರ ತತ್ತ್ವವು ಆಶ್ರಮಗಳಲ್ಲಿ ಉಸಿರುಕಟ್ಟಿ ಸಾಯುವುದು ಬೇಡ. ಎಲ್ಲ ಕಟ್ಟು–ಕಟ್ಟಳೆಗಳನ್ನು ಮೀರಿ, ಸಮಾಜದ ಸರ್ವೋದಯಕ್ಕಾಗಿ ತಮ್ಮ ಜೀವನವನ್ನೇ ತ್ಯಾಗಮಾಡಿದ ಈ ಕ್ರಾಂತಿಕಾರಿ ಪುರುಷರ ತತ್ತ್ವಗಳು ಜಾತಿ–ಮತ–ಪಂಥ–ದೇಶ–ಭಾಷೆಗಳೆಂಬ ಕಟ್ಟು–ಕಟ್ಟಳೆಗಳನ್ನು ನೀಗಿ ವಿಶ್ವಚೇತನಗಳನ್ನು ನಿರ್ಮಿಸಲಿ! ಇವರಿಬ್ಬರ ಕನಸನ್ನು ನನಸಾಗಿಸುವುದು ನಮ್ಮೆಲ್ಲರ ಜವಾಬ್ದಾರಿಯಲ್ಲವೇ?

With Best Compliments from:

# SESHADRIPURAM EDUCATIONAL INSTITUTIONS, BANGALORE - 20

Estd. 1930
www.set.edu.in

Seshadripuram Stree Samaja Middle School
Seshadripuram High School
Seshadripuram Pre-University College (Aided)
Seshadripuram Evening Pre-University College
Seshadripuram College & Post-Graduate Centre
Seshadripuram Evening Degree College
Seshadripuram Composite Pre-University College
Seshadripuram Institure for Studies in Chartered Accountancy
Seshadripuram Institure of Commerce & Management
Seshadripuram Law College
Seshadripuram Higher Primary School, Kumara Park
Seshadripuram Womens' Hostel, Yelahanka
Seshadripuram Institure of Management Studies, Yelahanka
Seshadripuram Academy for Global Excellence, Yelahanka
Seshadripuram Research Foundation, Yelahanka
Seshadripuram Institure of Advanced Studies & Research, Yelahanka
Seshadripuram Fist Grade College, Yelahanka
Seshadripuram Pre-University College, Yelahanka
Seshadripuram High School, Yelahanka
Seshadripuram Public School, Yelahanka
Seshadripuram Higer Primary School, Yelahanka
Seshadripuram Pre-Primary School, Yelahanka
Seshadripuram Independent Pre-University College, Magadi Road
Seshadripuram Commerce College, Magadi Road,
Seshadripuram Pre-University College, Kengeri
Seshadripuram Academy of Business Studies, Kengeri

**Dr. Wooday P. Krishna**
**Hon. General Secretary**

**N.R. Panditharadhya**
**President**

# ವಿವೇಕಾನಂದರ ಸಂಸ್ಕೃತ ಪಾಂಡಿತ್ಯ

**ಸ್ವಾಮಿ ವಿವೇಕಾನಂದರು ಪೌರಸ್ತ್ಯ ಶಾಸ್ತ್ರಗಳ ಆಳವಾದ ಅಧ್ಯಯನ ಮಾಡಿದವರು. ಹಾಗೆಯೇ ಅದರ ಮಾಧ್ಯಮವಾದ ಸಂಸ್ಕೃತ ಭಾಷೆಯಲ್ಲಿ ಪ್ರೌಢಿಮೆ ಉಳ್ಳವರು. ಸಂಸ್ಕೃತ ಭಾಷೆಯು ಜನಸಾಮಾನ್ಯರಲ್ಲೂ ಪ್ರಸಾರವಾಗಬೇಕೆಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು. ಹೀಗೆ ಸ್ವಾಮಿ ವಿವೇಕಾನಂದರಿಗೂ ಸಂಸ್ಕೃತ ಭಾಷೆಗೂ ಅವಿನಾಭಾವ ಸಂಬಂಧವಿದೆ, ಇದನ್ನು ಸೋದಾಹರಣವಾಗಿ ಬಿಂಬಿಸಿರುವ ಲೇಖಕರು ನಿವೃತ್ತ ಪ್ರೌಢಶಾಲಾ ಕನ್ನಡ ಅಧ್ಯಾಪಕರು. ಸಂಸ್ಕೃತ ಭಾಷೆಯಲ್ಲಿ ವಿಶೇಷ ಅಧ್ಯಯನ ನಡೆಸಿರುವ ಅವರು ಡಾಕ್ಟರೇಟ್ ಪದವಿಯನ್ನೂ ಪಡೆದಿದ್ದಾರೆ.**

ಸ್ವಾಮಿ ವಿವೇಕಾನಂದರು ಕ್ರಿಶ ೧೮೯೭ ರಲ್ಲಿ ವಿಲಾಯತಿಯಿಂದ ಹಿಂತಿರುಗಿ ಬಂದು ಕೆಲ ದಿನಗಳ ಮಟ್ಟಿಗೆ ಕಾಶೀಪುರದ ಗೋಪಾಲ ಲಾಲ ಸೀಲರ ತೋಟದಲ್ಲಿ ವಾಸ್ತವ್ಯ ಮಾಡಿದ್ದರು. ಅದಾಗಲೇ ಸ್ವಾಮೀಜಿಯವರ ಖ್ಯಾತಿ ಭರತಖಂಡದ ತುಂಬೆಲ್ಲ ಹಬ್ಬಿತ್ತು. ಅದರಿಂದ ಹಲವರು ಅವರ ದರ್ಶನಕ್ಕಾಗಿ, ಮತ್ತೆ ಕೆಲವರು ತತ್ತ್ವಾನ್ವೇಷಿಗಳಾಗಿ, ಇನ್ನು ಕೆಲವರು "ಇವರೇನು ಮಹಾ" ಎಂದು ಪರೀಕ್ಷಾರ್ಥವಾಗಿ, ಅಲ್ಲಿಗೆ ಬರುತ್ತಿದ್ದರು. ಆಗ ನಡೆದ ಒಂದು ಘಟನೆಯನ್ನು ಸ್ವಾಮಿ ವಿವೇಕಾನಂದ ಕೃತಿಸಂಗ್ರಹ ಪುಸ್ತಕದ 'ಸಂವಾದ ತರಂಗಿಣಿ' ಭಾಗದಲ್ಲಿ ಹೀಗೆ ವರ್ಣಿಸಲಾಗಿದೆ:

ಕಲ್ಕತ್ತೆಯ ಬಡೋ ಬಾಜಾರಿನಲ್ಲಿ ಬಹು ಪಂಡಿತರು ವಾಸಿಸುವರು. ಹಣವಂತರಾದ ಮಾರ್ವಾಡಿ ವರ್ತಕರು ಅವರನ್ನು ಪೋಷಿಸುತ್ತಿದ್ದರು. ಈ ವೇದಶಾಸ್ತ್ರಜ್ಞರಾದ ಪಂಡಿತರೆಲ್ಲ ಆ ಕಾಲದಲ್ಲಿ ಸ್ವಾಮಿಗಳ ಕೀರ್ತಿಯನ್ನು ಕೇಳಿದ್ದರು. ಅವರಲ್ಲಿ ಕೆಲವರು ದೊಡ್ಡ ಪಂಡಿತರು. ಸ್ವಾಮಿಗಳೊಡನೆ ವಾಕ್ಯಾರ್ಥಮಾಡುವ ಅಭಿಲಾಷೆಯಿಂದ ಒಂದು ದಿನ ಈ ತೋಟಕ್ಕೆ ಬಂದರು.

ಬಂದಿದ್ದ ಪಂಡಿತರೆಲ್ಲ ಸಂಸ್ಕೃತಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವುಳ್ಳವರಾಗಿದ್ದರು. ಬಂದಕೂಡಲೆ ಅವರು, ಗುಂಪಿನಿಂದ ಸುತ್ತುವರಿಯಲ್ಪಟ್ಟಿದ್ದ ಸ್ವಾಮಿಗಳನ್ನು ಭೇಟಿಮಾಡಿ, ಅವರೊಡನೆ ಸಂಸ್ಕೃತದಲ್ಲಿ ಮಾತು ಮೊದಲು ಮಾಡಿದರು. ಸ್ವಾಮೀಜಿ ಸಂಸ್ಕೃತದಲ್ಲಿಯೇ ಅವರಿಗೆ ಉತ್ತರ ಕೊಡುತ್ತಿದ್ದರು. ಪಂಡಿತರೆಲ್ಲರೂ ಸಾಮಾನ್ಯವಾಗಿ ಒಟ್ಟಿಗೇ ಗದ್ದಲ ಮಾಡಿ ಸ್ವಾಮೀಜಿಗೆ, ತತ್ತ್ವಶಾಸ್ತ್ರದ ಬಗ್ಗೆ ಕೂಟಪ್ರಶ್ನೆಗಳನ್ನು ಹಾಕುತ್ತಿದ್ದರು. ಸ್ವಾಮೀಜಿ ಪ್ರಶಾಂತ ಗಂಭೀರ ಭಾವದಿಂದ, ನಿಧಾನವಾಗಿ ಈ ವಿಷಯಗಳಲ್ಲಿ ತಮ್ಮ ವಿಚಾರಪೂರ್ವಕವಾದ ಸಿದ್ಧಾಂತವನ್ನು ಹೇಳುತ್ತಿದ್ದರು. ಸ್ವಾಮೀಜಿಯ ಸಂಸ್ಕೃತಮಾತು ಪಂಡಿತರ ಮಾತಿಗಿಂತಲೂ ಕಿವಿಗೆ ಇಂಪಾಗಿಯೂ ಸುಲಲಿತವಾಗಿಯೂ ಇತ್ತು. ಪಂಡಿತರು ಆಮೇಲೆ ಇದನ್ನು ಒಪ್ಪಿಕೊಂಡರು.


ಸಂಸ್ಕೃತಭಾಷೆಯಲ್ಲಿ ಸ್ವಾಮೀಜಿ ಹೀಗೆ ನಿರರ್ಗಳವಾಗಿ ಮಾತನಾಡುವದನ್ನು ನೋಡಿ ಅವರ ಗುರುಭಾಯಿಗಳೂ ಆ ದಿನ ಸ್ತಂಭಿತರಾಗಿದ್ದರು. ಏಕೆಂದರೆ ಇದಕ್ಕೆ ಹಿಂದೆ, ಆರು ವರ್ಷಗಳ ಕಾಲ ಯೂರೋಪ್ ಮತ್ತು ಅಮೇರಿಕಾದಲ್ಲಿ ಇರುವಾಗ ಸಂಸ್ಕೃತವನ್ನು ಮಾತನಾಡುವದಕ್ಕೆ ಸ್ವಾಮೀಜಿಗೆ ಅಷ್ಟೊಂದು ಅವಕಾಶ ದೊರೆಯಲಿಲ್ಲವೆಂಬುದು ಅವರಿಗೆ ಗೊತ್ತಿತ್ತು. ಶಾಸ್ತ್ರವನ್ನು ತಿಳಿದ ಈ ಪಂಡಿತಸಮೂಹದೊಡನೆ ಹೀಗೆ ವಾಕ್ಯಾರ್ಥ ಮಾಡಿದ್ದರಿಂದ ಸ್ವಾಮಿಗಳಲ್ಲಿ ಅದ್ಭುತ ಮೇಧಾಶಕ್ತಿಯ ಸ್ಫುರಣೆ ಇದೆಯೆಂದು ಅಲ್ಲಿದ್ದವರು ತಿಳಿದುಕೊಂಡರು. ಆ ದಿನ ಆ ಸಭೆಯಲ್ಲಿ ರಾಮಕೃಷ್ಣಾನಂದ, ಯೋಗಾನಂದ, ನಿರ್ಮಲಾನಂದ, ತುರೀಯಾನಂದ ಮತ್ತು ಶಿವಾನಂದ ಸ್ವಾಮಿಗಳೂ ಇದ್ದರು.

ಸ್ವಾಮೀಜಿ ಪಂಡಿತರೊಡನೆ ವಾದ ಮಾಡುವಾಗ ಸಿದ್ಧಾಂತ ಪಕ್ಷವನ್ನು ಹಿಡಿದಿದ್ದರು. ಪಂಡಿತರು ಪೂರ್ವಪಕ್ಷ ವಹಿಸಿದ್ದರು. ಆಗ ನಡೆದ ಒಂದು ವಿಷಯವನ್ನು ಶಿಷ್ಯರೊಬ್ಬರು ಈ ರೀತಿ ದಾಖಲಿಸಿದ್ದಾರೆ: ಸ್ವಾಮೀಜಿ ಒಂದು ಕಡೆ 'ಸ್ವಸ್ತಿ' ಎಂದು ಹೇಳಬೇಕಿದ್ದಾಗ, 'ಅಸ್ತಿ' ಎನ್ನಲು, ಪಂಡಿತರು ನಗುವುದಕ್ಕೆ ತೊಡಗಿದರು. ಅದನ್ನು ನೋಡಿ ಸ್ವಾಮೀಜಿ ಆ ಕ್ಷಣವೇ **"ಪಂಡಿತಾನಾಂ ದಾಸೋಽಹಂ ಕ್ಷಂತವ್ಯಮ್ ಏತತ್ ಸ್ಖಲನಂ"** (ನಾನು ಪಂಡಿತರ ದಾಸ. ನನ್ನ ಈ ವ್ಯಾಕರಣ ತಪ್ಪನ್ನು ಕ್ಷಮಿಸಬೇಕು.) ಎಂದರು. ಪಂಡಿತರು ಸ್ವಾಮಿಗಳ ಈ ವಿಧವಾದ ನಮ್ರತೆಯನ್ನು ನೋಡಿ ಬೆರಗಾಗಿಹೋದರು. ಬಹಳ ಹೊತ್ತು ವಾದಗಳಾದ ಮೇಲೆ ಸಿದ್ಧಾಂತ ಪಕ್ಷವನ್ನು ಹಿಡಿದು ವಿಚಾರ ಮಾಡಿದ್ದು ಸಮರ್ಪಕವಾಯಿತೆಂದು ಪಂಡಿತರು ಒಪ್ಪಿಕೊಂಡು ಸಂತೋಷದಿಂದ ಮಾತನಾಡಿ ಹೊರಡುವುದಕ್ಕೆ ಸಿದ್ಧರಾದರು. ಅಲ್ಲಿಗೆ ಬಂದಿದ್ದ ನಾಲ್ಕೈದು ಜನ ದೊಡ್ಡ ಮನುಷ್ಯರು ಅವರ ಹಿಂದೆ ಹೋಗಿ, "ಮಹಾಶಯರೆ, ಸ್ವಾಮೀಜಿಯ ವಿಷಯವಾಗಿ ತಾವೇನು



ತಿಳಿದುಕೊಳ್ಳೋಣವಾಯಿತು?" ಎಂದು ಕೇಳಿದರು. ಅದಕ್ಕೆ ಅವರಲ್ಲಿ ಎಲ್ಲರಿಗಿಂತ ಹೆಚ್ಚು ವಯಸ್ಸಾಗಿದ್ದ ಪಂಡಿತರು, "ವ್ಯಾಕರಣದಲ್ಲಿ ಗಂಭೀರವಾದ ವ್ಯುತ್ಪತ್ತಿ ಇಲ್ಲದಿದ್ದರೂ ಸ್ವಾಮಿಗಳು ಶಾಸ್ತ್ರದ ಗೂಢಾರ್ಥವನ್ನು ಬಲ್ಲವರು. ವಾಕ್ಯಾರ್ಥ ಮಾಡುವುದರಲ್ಲಿ ಅದ್ವಿತೀಯರು ಮತ್ತು ತಮ್ಮ ಪ್ರತಿಭಾ ಬಲದಿಂದ ಖಂಡನೆ ಮಾಡುತ್ತಾ ಅದ್ಭುತ ಪಾಂಡಿತ್ಯವನ್ನು ತೋರಿಸಿದ್ದಾರೆ" ಎಂದು ಉತ್ತರಕೊಟ್ಟರು. ಇಲ್ಲಿ ಪೂರ್ವಪಕ್ಷ ಮಾಡುತ್ತಿದ್ದ ಪಂಡಿತರು ಪೂರ್ವ ಮೀಮಾಂಸಾಶಾಸ್ತ್ರದಲ್ಲಿ ದೊಡ್ಡ ವಿದ್ವಾಂಸರು. ಸ್ವಾಮೀಜಿ ಉತ್ತರ ಮೀಮಾಂಸಾ ಪಕ್ಷವನ್ನು ಹಿಡಿದು ಅವರಿಗೆ ಜ್ಞಾನಕಾಂಡದ ಶ್ರೇಷ್ಠತೆಯನ್ನು ತೋರಿಸಿದರು.





ಈ ಮೇಲಿನ ಘಟನೆಯಿಂದ ವಿವೇಕಾನಂದರ ಸಂಸ್ಕೃತ ಪಾಂಡಿತ್ಯದ ಪರಿಚಯವಾಗುತ್ತದೆ. ಇದರೊಂದಿಗೆ ಪಂಡಿತರು ಟೀಕಿಸಿದ 'ವ್ಯಾಕರಣದಲ್ಲಿ ಗಂಭೀರವಾದ ವ್ಯುತ್ಪತ್ತಿ ಇಲ್ಲದಿದ್ದರೂ' ಎಂಬ ವಿಷಯವನ್ನು ಕುರಿತು, ವಿವೇಕಾನಂದರು ಈ ರೀತಿ ಅಭಿಪ್ರಾಯಪಟ್ಟರು: "ಬಹಳ ವರ್ಷಗಳಿಂದ ಸಂಸ್ಕೃತದಲ್ಲಿ ಮಾತು ಕತೆಗಳನ್ನಾಡದೆ ಇದ್ದುದರಿಂದ ಹೀಗೆ ತಪ್ಪು ಬಂದುಬಿಟ್ಟಿತು. ಪಾಶ್ಚಾತ್ಯ ದೇಶದಲ್ಲಿ ವಾದ ಮಾಡುತ್ತಿರುವಾಗ ಮೂಲ ವಿಷಯ ವನ್ನು ಬಿಟ್ಟು, ಹೀಗೆ ಭಾಷೆಯ ಒಂದು ಸಾಮಾನ್ಯವಾದ ದೋಷ ವನ್ನು ಹಿಡಿಯುವುದು, ಪ್ರತಿಪಕ್ಷದವರ ಮಹಾ ಅಸೌಜನ್ಯವನ್ನು ತೋರಿಸುತ್ತದೆ. ಅಂಥ ಸಮಯದಲ್ಲಿ ಆ ಜನ ಭಾಷೆಯ ಕಡೆಗೆ ಲಕ್ಷ್ಯವನ್ನೇ ಕೊಡುವುದಿಲ್ಲ. ಆದರೆ ನಮ್ಮ ಪಂಡಿತರಿಗೆ ರಂಧ್ರಾ ನ್ವೇಷಣೆಯೊಂದೇ ಪರಮಕಾರ್ಯ. ತಿರುಳನ್ನು ಬಿಟ್ಟು ಸಿಪ್ಪೆಯನ್ನೇ ತಿನ್ನುತ್ತಾರೆ. ತನ್ನ ಬಾಲವನ್ನೇ ಕಚ್ಚಿಕೊಳ್ಳಲು ಹೋಗುವ ಶುನಕದಂತೆ ಅವರಿಗೆ ಯಾವ ಸಿದ್ಧಾಂತವೂ ಕರಗತವಾಗುವುದಿಲ್ಲ. ಈ ದೇಶದಲ್ಲಿಯಾದರೋ ಸಿಪ್ಪೆಗಾಗಿಯೇ ಹೊಡೆದಾಟವಾಗುತ್ತದೆ. ಒಳಗಿನ ತಿರುಳನ್ನು ಕೇಳುವವನೇ ಇಲ್ಲ." ಹೀಗೆ ಪಾಂಡಿತ್ಯದಲ್ಲಿ ಯಾವುದಕ್ಕೆ ಪ್ರಾಧಾನ್ಯ ಕೊಡಬೇಕು ಎಂಬುದರ ಬಗ್ಗೆ ಸ್ವಾಮೀಜಿ ತಮ್ಮ ಖಚಿತವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಈ ಮೂಲಕ ವಿವೇಕಾನಂದರು ಸಂಸ್ಕೃತದಲ್ಲಿ ಅಸಾಧಾರಣ ಮಟ್ಟದ ಪಾಂಡಿತ್ಯವನ್ನು ಪಡೆದಿದ್ದರೆಂದು ನಮಗೆ ತಿಳಿಯುತ್ತದೆ. ಈ ವಿದ್ಯಾಭ್ಯಾಸವನ್ನು ಎಲ್ಲಿ ಯಾರಿಂದ ಯಾವಾಗ ಪಡೆದರು? ಸಂಸ್ಕೃತದ ಪ್ರಾರಂಭಿಕ ಪಾಠವನ್ನು ತಂದೆ ವಿಶ್ವನಾಥದತ್ತರಿಂದ ಮತ್ತು ಸ್ವಲ್ಪಮಟ್ಟಿಗೆ ಶಾಲೆಯಲ್ಲಿ ಕಲಿತರೆಂದು ತಿಳಿದುಬರುತ್ತದೆ. ಶಾಲೆಯಲ್ಲಿ ವ್ಯಾಸಂಗ ಮಾಡುವಾಗ ನರೇಂದ್ರನಿಗೆ ಸಂಸ್ಕೃತ, ಇಂಗ್ಲಿಷ್, ಇತಿಹಾಸ ಈ ಮೂರು ವಿಷಯಗಳಲ್ಲಿ ತುಂಬ ಆಸಕ್ತಿ ಇತ್ತಂತೆ. ಅವರ ಹದಿನಾಲ್ಕನೇ ವಯಸ್ಸಿನಲ್ಲಿ ತಂದೆ ವಿಶ್ವನಾಥದತ್ತರು ಕಾರ್ಯಭಾರದಿಂದ ಮಧ್ಯಪ್ರದೇಶದ ರಾಯಪುರಕ್ಕೆ ಹೋಗಿದ್ದರು. ಆಗ ನರೇಂದ್ರನನ್ನೂ ತಮ್ಮೊಡನೆ ಕರೆದೊಯ್ದು ಮಗನಿಗೆ ಇತಿಹಾಸ, ದರ್ಶನ, ಸಾಹಿತ್ಯಕ್ಕೆ ಸಂಬಂಧಿಸಿದ ನಾನಾ ಗ್ರಂಥಗಳನ್ನು ಓದಿಸಿದರು. ಆಗಲೇ ಅವರಿಗೆ ಇಂಗ್ಲಿಷ್, ಸಂಸ್ಕೃತ, ಬಂಗಾಳಿ ಭಾಷೆಗಳ ಸಾಹಿತ್ಯದ ಪರಿಚಯವಾಯಿತು. ಅವರ ಮನೆಗೆ ತಂದೆಯೊಂದಿಗೆ ಚರ್ಚೆಗಾಗಿ ಬರುತ್ತಿದ್ದ ನಾನಾ ಪಂಡಿತೋತ್ತಮರೊಂದಿಗೆ ಮಾತನಾಡುವ, ಬರೆಯುವ ಅವಕಾಶವೂ ದೊರೆತು, ಅವರ ಭಾಷಾ ಪಾಂಡಿತ್ಯ ಬೆಳೆಯಲು ಅನುಕೂಲವಾಯಿತು.

೧೮೯೨ರಲ್ಲಿ ತಿರುವಾಂಕೂರು ರಾಜರ ಆಸ್ಥಾನ ಪಂಡಿತರಾಗಿದ್ದ ವೈಯ್ಯಾಕರಣಿಗಳಾದ ವಾಂಚೀಶ್ವರ ಶಾಸ್ತ್ರಿ ಎಂಬುವರಲ್ಲಿ ಸ್ವಾಮೀಜಸಂಸ್ಕೃತ ವ್ಯಾಕರಣವನ್ನು ಆಳವಾಗಿ ಅಧ್ಯಯನ ಮಾಡಿದ್ದರೆಂದು ತಿಳಿದು ಬರುತ್ತದೆ. ಹಾಗೆಯೇ ಜುನಾಗಢದ ದಿವಾನರಾಗಿದ್ದ ಹರಿದಾಸ್ ವಿಹಾರಿದಾಸ್ ದೇಸಾಯಿಯವರ ಮನೆಯಲ್ಲಿ ಕೆಲವು ತಿಂಗಳು ವಿವೇಕಾನಂದರು ತಂಗಿದ್ದರಂತೆ. ಆಗ ಅಲ್ಲಿನ ವೇದ ಪಂಡಿತರ ಸಹವಾಸದಿಂದ ಭಾರತೀಯ ತತ್ತ್ವಶಾಸ್ತ್ರ ಮತ್ತು ಸಂಸ್ಕೃತದ ಅಧ್ಯಯನವನ್ನು ಆಳವಾಗಿ ಮಾಡಿದ್ದರೆಂದು ತಿಳಿದುಬರುತ್ತದೆ.

ಯತಿಗಳು, ವಾಗ್ಮಿಗಳು, ಆಕರ್ಷಕ ಶಾರೀರ ಮತ್ತು ಶರೀರ ಉಳ್ಳವರೂ, ಸೂಕ್ಷ್ಮಮತಿಗಳೂ ಆಗಿರುವುದರೊಂದಿಗೆ ಇತಿಹಾಸ, ಇಂಗ್ಲಿಷ್ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರದ ಆಳವಾದ ಅಧ್ಯಯನವೂ ಇದ್ದುದರಿಂದ, ಭಾರತದ ಹಲವಾರು ಪಂಡಿತರ ಸಾಹಚರ್ಯ ಅನಾಯಾಸವಾಗಿ ವಿವೇಕಾನಂದರಿಗೆ ದೊರೆಯಿತು. ಇದರೊಂದಿಗೆ ಪ್ರಾಚ್ಯವಿದ್ಯಾಪ್ರತಿನಿಧಿಸ್ವರೂಪರಾದ ಶ್ರೀರಾಮಕೃಷ್ಣರ ಪ್ರಭಾವವೂ ವಿವೇಕಾನಂದರ ಮೇಲಾಗಿದ್ದುದರಿಂದ, ಅವರ ಸಂಸ್ಕೃತ ಪಾಂಡಿತ್ಯ ಶುಷ್ಕವಾಗಿರಲಿಲ್ಲ. ಅವರ ತಂದೆ ವಿಶ್ವನಾಥದತ್ತರು ಉದಾರಿಗಳೂ, ಪ್ರಗತಿಪರ ಚಿಂತಕರೂ ಆದುದರಿಂದ, ವಿವೇಕಾನಂದರ ಧಾರ್ಮಿಕ, ವೇದಾಂತ, ಸಾಂಸ್ಕೃತಿಕ, ಸಾಮಾಜಿಕ ಚಿಂತನೆಗಳಲ್ಲಿ ತಂದೆಯ ಗಾಢವಾದ ಪ್ರಭಾವವಿರುವುದನ್ನು ಕಾಣಬಹುದಾಗಿದೆ. ವಿವೇಕಾನಂದರಿಗೆ ಸಂಸ್ಕೃತ ಭಾಷೆ, ವ್ಯಾಕರಣಗಳು ಕೇವಲ ಕೂದಲು ಸೀಳುವ, ಭಾಷಣಕ್ಕೆ ಉದಾಹರಣೆ ಒದಗಿಸುವ, ವಾದ ಪ್ರತಿವಾದಕ್ಕೆ ಪುಷ್ಟಿಯನ್ನೀಡುವ ಸರಕಾಗಲಿಲ್ಲ. ಬದಲಿಗೆ ಅವರ ಸಂಸ್ಕೃತ ಪಾಂಡಿತ್ಯ, ಕೇವಲ ಪಂಡಿತಮುಖಿಯಾಗದೆ, ಸಮಾಜಮುಖಿಯಾಯಿತು, ಪುಸ್ತಕೀಯವಾಗದೆ ಮಸ್ತಕೀಯ ವಾಯಿತು. ಅವರ ಚಿಂತನೆಗಳು ಸೃಜನಶೀಲವೂ, ನವನವೋನ್ಮೇಷ ಶಾಲಿನಿಯೂ ಆದವು. ಇದರ ಪರಿಣಾಮ, ಅವರ ಇಡೀ ವ್ಯಕ್ತಿತ್ವ ಉದಾರವೂ ಪ್ರಗತಿಪರವೂ ಆಯಿತು. ಅದರಿಂದ ಅವರ ಸಂಸ್ಕೃತ ಪಾಂಡಿತ್ಯವೂ ಪ್ರಗತಿಪರವಾಗಲು ಅನುಕೂಲವಾಯಿತು. ಇದರೊಂದಿಗೆ rational proof (ತರ್ಕಬದ್ಧ ಪುರಾವೆ) ಮತ್ತು pragmatic test (ವಸ್ತುನಿಷ್ಠ ಪರೀಕ್ಷೆ) ಇಲ್ಲದೇ ಯಾವುದನ್ನೂ ಒಪ್ಪದ ಮನೋಭಾವವನ್ನು ಅವರ ಸಂಸ್ಕೃತ ಪಾಂಡಿತ್ಯದಲ್ಲೂ ಕಾಣಬಹುದಾಗಿದೆ.

ವೇದ, ಉಪನಿಷತ್ತು, ಗೀತೆ, ರಾಮಾಯಣ, ಮಹಾಭಾರತ, ಕೆಲವು ಪುರಾಣಗಳು, ಮನುಧರ್ಮಶಾಸ್ತ್ರದಂತಹ ಹಿಂದೂ ಧರ್ಮದ ಶಾಸ್ತ್ರಗ್ರಂಥಗಳನ್ನು ಮೂಲದಲ್ಲಿಯೇ ಓದಿ, ಅವರು ಅರ್ಥೈಸಿಕೊಂಡಿದ್ದರು. ಈ ಗ್ರಂಥಗಳನ್ನು ಆಸಕ್ತಿ, ಕುತೂಹಲಗಳಿಂದ ಅಧ್ಯಯನ ಮಾಡುವುದರೊಂದಿಗೆ, ಅವುಗಳನ್ನು ಪ್ರಶ್ನಿಸುವ, ಚಿಂತಿಸುವ ಪಾಂಡಿತ್ಯವನ್ನೂ ಪಡೆದಿದ್ದರು. ಅವರು ಒಂದು ಕಡೆ ಹೀಗೆ ಹೇಳುತ್ತಾರೆ:

"ಕೆಲವು ವರ್ಷಗಳ ಹಿಂದೆ ನನಗೆ ವೈದಿಕ ವ್ಯಾಕರಣವನ್ನು ಓದಬೇಕೆಂದು ಆಸೆಯಾಯಿತು. ಬಹಳ ಉತ್ಸಾಹದಿಂದ ಪಾಣಿನಿ ಸೂತ್ರಗಳನ್ನು ಮತ್ತು ಮಹಾಭಾಷ್ಯವನ್ನು ಓದಲು ಪ್ರಯತ್ನಿಸಿದೆ. ಅದರಲ್ಲಿ ಆಶ್ಚರ್ಯವಾದುದೆಂದರೆ ಸಾಧಾರಣ ನಿಯಮಕ್ಕೆ ವಿರೋಧವಾದ ಒಂದು ನಿಯಮ ಮಾಡುವರು. ಅನಂತರ ಒಂದು ವಿನಾಯಿತಿ ತರುವರು. ಈ ನಿಯಮ ಇದಕ್ಕೆ ಅನ್ವಯಿಸುವದಿಲ್ಲ ಎನ್ನುವರು.

"ಯಾರಿಗಾದರೂ ಏನನ್ನಾದರೂ ಬರೆಯುವುದಕ್ಕೆ ಎಷ್ಟು ಸ್ವಾತಂತ್ರ್ಯವಿದೆ ಎಂಬುದನ್ನು ನೋಡಿ. ಯಾಸ್ಕನ ನಿರುಕ್ತ ಒಂದೇ ರಕ್ಷಣೆ. ಇದರಲ್ಲಿ ಹಲವು ಸಮಾನಾರ್ಥ ಪದಗಳಿವೆ. ಹೀಗಿದ್ದರೆ ನಿಮಗೆ ಇಚ್ಛೆ ಬಂದಷ್ಟು ಉಪನಿಷತ್ತನ್ನು ಬರೆಯುವದು ಎಷ್ಟು ಸುಲಭ! ಸ್ವಲ್ಪ ಸಂಸ್ಕೃತ ಭಾಷಾ ಪರಿಚಯ ಇದ್ದು, ಹಿಂದಿನ ಸಂಸ್ಕೃತ ಪದಗಳಂತೆ ಕಾಣುವ ಪದಗಳನ್ನು ಸೃಷ್ಟಿಸಿದರೆ ಸಾಕು, ವ್ಯಾಕರಣದ ಅಂಜಿಕೆಯೇ ಇಲ್ಲ. ಅನಂತರ ರಜಸುಲ್ಲಾನೋ